ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 29-04-1971.

## *ಬೇಹದ್ದಿನ ಪರೀಕ್ಷೆಯಲ್ಲಿ ಪಾಸ್ ಆಗಲು ಸಾಧನ* (बेहद के पेपर में पास होने का साधन)

ಇಂದು ಭಟ್ಟಿಯ ಸಮಾಪ್ತಿ ಇದೆಯೇ ಅಥವಾ ಪ್ರ್ಯಾಕ್ಟಿಕಲ್ ಪರೀಕ್ಷೆಯ ಆರಂಭವೋ? ಈಗ ನೀವು ಎಲ್ಲಿ ಹೋಗುತ್ತಿರುವಿರಿ? ಪರೀಕ್ಷೆಯ ಹಾಲ್‌ಗೆ ಹೋಗುತ್ತಿರುವಿರೋ ಅಥವಾ ನಿಮ್ಮ ನಿಮ್ಮ ಸ್ಥಾನಕ್ಕೋ? ಪರೀಕ್ಷೆಯ ಹಾಲ್ ಎಂದು ತಿಳಿದಾಗ ಪ್ರ್ಯಾಕ್ಟಿಕಲ್ ನಲ್ಲಿ ಪಾಸ್ ಆಗಿ ತೋರಿಸುವಿರಿ. ನಮ್ಮ ಮನೆಗೆ ಹೋಗುತ್ತಿದ್ದೇವೆಂದು ತಿಳಿಯಬೇಡಿ. ಇಲ್ಲ. ಅತ್ಯಂತ ದೊಡ್ಡ ಕೋರ್ಸ್ ಮಾಡಿ ಅತ್ಯಂತ ದೊಡ್ಡ ಪರೀಕ್ಷೆ ಕೊಡಲು ಪರೀಕ್ಷಾ ಹಾಲ್‌ಗೆ ಹೋಗುತ್ತಿದ್ದೇನೆ ಎಂದು ತಿಳಿಯಿರಿ. ಸೆಂಟರ್ ನಲ್ಲಿ ವಿದ್ಯಾಭ್ಯಾಸ ಮಾಡುವಾಗ ಅದು ಶಾಲೆಯ ಅಭ್ಯಾಸ ಆಯಿತು. ಆದರೆ ಮಧುಬನವೆಂಬ ವರದಾನಿ ಭೂಮಿಗೆ ಬಂದಾಗ ಡೈರೆಕ್ಟ್ ಬಾಪ್‌ದಾದಾ ಮತ್ತು ನಿಮಿತ್ತ ಮಹಾರಥಿಗಳಿಂದ ಟ್ರೇನಿಂಗ್ ಅಥವಾ ವಿದ್ಯಾಭ್ಯಾಸ ಮಾಡುತ್ತೀರಿ ಆಗ ಕಾಲೇಜ್' ಅಥವಾ ವಿಶ್ವ ವಿದ್ಯಾಲಯದ ವಿದ್ಯಾರ್ಥಿ ಎಂದು ತಿಳಿಯಿರಿ. ಶಾಲೆಯ ಪರೀಕ್ಷೆಗೂ ಮತ್ತು ವಿಶ್ವ ವಿದ್ಯಾಲಯದ ಪರೀಕ್ಷೆಗೂ ವ್ಯತ್ಯಾಸ ಇರುತ್ತದೆ. ವಿದ್ಯಾಭ್ಯಾಸದಲ್ಲಿಯೂ ವ್ಯತ್ಯಾಸ ಇರುತ್ತದೆ. ಈ ಭಟ್ಟಿಯಲ್ಲಿ ಟ್ರೇನಿಂಗ್ (ತರಬೇತಿ) ತೆಗೆದುಕೊಳ್ಳುವುದು ಎಂದರೆ ವಿಶ್ವ ವಿದ್ಯಾಲಯದ ವಿದ್ಯಾರ್ಥಿ ಆಗುವುದು. ಆದ್ದರಿಂದ ಈಗ ವಿಶ್ವ ವಿದ್ಯಾಲಯದ ಪರೀಕ್ಷೆ ಕೊಡಲು ಹೋಗುತ್ತಿರುವಿರಿ. ವಿಶ್ವ ವಿದ್ಯಾಲಯದ ಪರೀಕ್ಷೆಯ ನಂತರವೇ ಪದವಿ ಪ್ರಾಪ್ತಿ ಆಗುತ್ತದೆ. ಅದೇ ರೀತಿ ಭಟ್ಟಿಗೆ ಬಂದ ನಂತರ ಯಾರು ಪ್ರಾಕ್ಟಿಕಲ್ ಪರೀಕ್ಷೆಯಲ್ಲಿ ಪಾಸ್ ಆಗುತ್ತಾರೆಯೋ ಅವರಿಗೆ ವರ್ತಮಾನದಲ್ಲಿ ಮತ್ತು ಭವಿಷ್ಯದಲ್ಲಿ ಪದವಿ ಮತ್ತು ಸ್ಥಾನ ಪ್ರಾಪ್ತಿ ಆಗುತ್ತದೆ. ಆ ಕಾರಣ ಇದನ್ನು ಸಾಧಾರಣ ಮಾತು ಎಂದು ತಿಳಿಯಬಾರದು. ಮೊದಲು ಸೆಂಟರ್‌ನಲ್ಲಿ ವಿದ್ಯಾಭ್ಯಾಸ ಮಾಡಿರಬಹುದು ಮತ್ತು ಪರೀಕ್ಷೆಯನ್ನೂ ಕೊಟ್ಟಿರಬಹುದು ಆದರೆ ಇದು ವಿಶ್ವವಿದ್ಯಾಲಯದ ಪರೀಕ್ಷೆಯಾಗಿದೆ. ಬಾಪ್ ದಾದಾರವರ ಮೂಲಕ ತಿಲಕ ಮತ್ತು ಮುದ್ರೆ ಪಡೆದ ನಂತರ ಪ್ರಾಕ್ಟಿಕಲ್ ಪರೀಕ್ಷೆಯಲ್ಲಿ ಯಾರಾದರೂ ನಾಪಾಸಾದರೆ ಏನಾಗುತ್ತದೆ? ಜನ್ಮ ಜನ್ಮಾಂತರಕ್ಕೆ ಅನುತ್ತೀರ್ಣದ ಕಲೆ ಬರುತ್ತದೆ. ಆದ್ದರಿಂದ ಯಾವುದಾದರೂ ನಾಪಾಸ್ ಆಗುವ ಸಂಸ್ಕಾರ ಅಥವಾ ಚಲನೆಯ ಅನುಭವ ಆದರೆ ಇಂದು ಉಳಿದುಕೊಂಡಿರುವ ಆ ಕಲೆ ಅಥವಾ ದುರ್ಬಲತೆಯ ಚಲನೆಯನ್ನು ಮತ್ತು ಸಂಸ್ಕಾರವನ್ನು ಅಳಿಸಿಹಾಕಿ ಹೋಗಿರಿ. ಇದರಿಂದ ಪರೀಕ್ಷೆಯ ಹಾಲ್‌ಗೆ ಹೋಗಿ ಪರೀಕ್ಷೆಯಲ್ಲಿ ನಾಪಾಸ್ ಆಗಬಾರದು. ತಿಳಿಯಿತೆ? ಆ ಪರೀಕ್ಷೆಯಂತೂ ಕೊಟ್ಟಿರಿ. ಅದು ಸಹಜ ಆಗಿದೆ ಆದರೆ ಅಂತಿಮ ಅಂಕಗಳು ಅಥವಾ ನಂಬರ್ ಪ್ರಾಕ್ಟಿಕಲ್ ಪರೀಕ್ಷೆಯ ನಂತರವೇ ಸಿಗುತ್ತದೆ. ಆದ್ದರಿಂದ ಈ ಸ್ಮೃತಿ ಮತ್ತು ದೃಷ್ಟಿ ಎರಡನ್ನೂ ಪರಿವರ್ತನೆ ಮಾಡಿಕೊಂಡು ಹೋಗಬೇಕು. ಪ್ರತಿ ಸೆಕೆಂಡ್ ನನ್ನ ಪರೀಕ್ಷೆ ನಡೆಯುತ್ತಿದೆ ಎನ್ನುವುದು ಸ್ಮೃತಿಯಲ್ಲಿರಬೇಕು. ದೃಷ್ಟಿಯಲ್ಲಿ ಏನಿರಬೇಕೆಂದರೆ ಓದಿಸುವಂತಹ ತಂದೆ ಮತ್ತು ಓದುವಂತಹ ನಾನು ವಿದ್ಯಾರ್ಥಿ ಆತ್ಮ ಆಗಿದ್ದೇನೆ. ಈ ಸ್ಮೃತಿ, ವೃತ್ತಿ ಮತ್ತು ದೃಷ್ಟಿ ಬದಲಾವಣೆ ಮಾಡಿಕೊಂಡು ಹೋದಾಗ ನಾಪಾಸ್ ಆಗುವುದಿಲ್ಲ ಆದರೆ ಪೂರ್ಣ ಪಾಸ್ ಆಗುತ್ತೀರಿ. ಆದ್ದರಿಂದ ಭಟ್ಟಿಯನ್ನು ಸಾಧಾರಣ ಎಂದು ತಿಳಿಯಬೇಡಿ. ಈ ಭಟ್ಟಿಯ ಮುದ್ರೆ ಮತ್ತು ತಿಲಕ ಸದಾ ಕಾಯಂ ಆಗಿಟ್ಟುಕೊಳ್ಳಿ. ಯಾವ ರೀತಿ ಯುನಿವರ್ಸಿಟಿಯ ಸರ್ಟಿಫಿಕೇಟ್‌ನಿಂದ ಕೆಲಸ ಸಿಗುತ್ತದೆ, ಪದವಿಯ ಪ್ರಾಪ್ತಿಯೂ ಆಗುತ್ತದೆ, ಅದೇ ರೀತಿ ಈ ಭಟ್ಟಿಯ ತಿಲಕ ಮತ್ತು ಮುದ್ರೆ ಪ್ರಾಕ್ಟಿಕಲ್‌ನಲ್ಲಿ ಸದಾ ನಿಮ್ಮ ಜೊತೆ ಇಟ್ಟುಕೊಳ್ಳಿ - ಇದು ಅತಿ ದೊಡ್ಡ ಸರ್ಟಿಫಿಕೇಟ್ ಆಗಿದೆ. ಯಾರಿಗೆ ಸರ್ಟಿಫಿಕೇಟ್ ಇರುವುದಿಲ್ಲವೋ ಅವರು ಎಂದೂ ಯಾವ ಪದವಿಯನ್ನೂ ಪಡೆಯಲು ಸಾಧ್ಯವಾಗುವುದಿಲ್ಲ. ಅದೇ ರೀತಿ ಇದೂ ಸಹ ಸರ್ಟಿಫಿಕೇಟ್ ಆಗಿದೆ. ವರ್ತಮಾನ ಮತ್ತು ಭವಿಷ್ಯದ ಪದವಿಯ ಪ್ರಾಪ್ತಿಯ ಮತ್ತು ಸಫಲತೆಯ ಸರ್ಟಿಫಿಕೇಟ್ ಆಗಿದೆ. ಸರ್ಟಿಫಿಕೇಟ್‌ನ್ನು ಬಹಳ ಸಂಭಾಲನೆ ಮಾಡಿಟ್ಟುಕೊಂಡಿರುತ್ತಾರೆ. ಅಲಕ್ಷತನದಿಂದ ಕಳೆದುಹೋಗುತ್ತದೆ. ಎಂದೂ ಮಾಯೆಗೆ ಅಧೀನರಾಗಿ ಅಂದರೆ ವಶರಾಗಿ ಪುರುಷಾರ್ಥದಲ್ಲಿ ಅಲಕ್ಷತನ ಮಾಡಬಾರದು. ಇಲ್ಲದಿದ್ದರೆ ನೀವು ಸರ್ಟಿಫಿಕೇಟ್ ಇದೆ ಎಂದು ತಿಳಿದುಕೊಂಡಿರುತ್ತೀರಿ ಆದರೆ ಮಾಯೆ ಅಥವಾ ರಾವಣ ಕದ್ದುಬಿಟ್ಟಿರುತ್ತಾನೆ. ಹೇಗೆ ಈಗಿನ ಕಾಲದ

ಡಾಕಾಯಿತರು ಮತ್ತು ಜೇಬುಗಳ್ಳರು ಯುಕ್ತಿಯಿಂದ ಕೆಲಸ ಮಾಡುತ್ತಾರೆ, ಹೊರಗಿನಿಂದ ಏನೂ ಗೊತ್ತಾಗುವುದಿಲ್ಲ ಆದರೆ ಒಳಗೆ ಎಲ್ಲವೂ ಖಾಲಿಯಾಗಿರುತ್ತದೆ. ಅದೇ ರೀತಿ ಪುರುಷಾರ್ಥದಲ್ಲಿ ಹುಡುಗಾಟಿಕೆ ಮಾಡಿದರೆ ರಾವಣ ಒಳಗಿಂದೊಳಗೆ ಸರ್ಟಿಫಿಕೇಟ್ ಕದ್ದುಬಿಡುತ್ತಾರೆ ಆದ್ದರಿಂದ ಎಚ್ಚರಿಕೆಯಿರಲಿ! ನೀವು ಪದವಿ ಪಡೆಯಲು ಸಾಧ್ಯವಾಗುವುದಿಲ್ಲ, ತಿಳಿಯಿತೆ.

ಇದು ಸೇವಾಧಾರಿ ಗುಂಪಾಗಿದೆ, ಈಗ ಏನು ಆಗಬೆಕು? ಸೇವಾಧಾರಿ ಹೇಗೆ ಆಗಿದ್ದೀರೋ ಅದೇ ರೀತಿ ಈಗ ಸೇವೆಯಲ್ಲಿ ಒಂದು ತ್ರಿಕಾಲದರ್ಶಿತನದ ಬುದ್ಧಿವಂತಿಕೆ ತುಂಬಬೇಕು ಮತ್ತು ಎರಡನೇಯದು ಆತ್ಮೀಯತೆಯ ಸುಗಂಧ ತುಂಬಬೇಕು. ಆಗ ಮೂರೂ ಮಾತುಗಳು ಒಂದಾಗುತ್ತವೆ. ಸೇವೆ, ಬುದ್ಧಿವಂತಿಕೆ ಮತ್ತು ಸುಗಂಧ, ಸುಗಂಧ ಸೂಕ್ಷ್ಮವಾಗಿರುತ್ತದೆ. ಈ ಆತ್ಮೀಯತೆಯ ಸುಗಂಧ ಮತ್ತು ತ್ರಿಕಾಲದರ್ಶಿತನದ ಬುದ್ಧಿವಂತಿಕೆ ತುಂಬುವುದರಿಂದ ಸೇವಾಧಾರಿಯ ಜೊತೆ ಸಫಲತಾ ಪೂರ್ಣರೂ ಆಗುತ್ತೀರಿ. ಆದ್ದರಿಂದ ಬುದ್ಧಿವಂತಿಕೆ ಮತ್ತು ಸುಗಂಧ ಎರಡನ್ನೂ ಎಲ್ಲಿಯವರೆಗೆ ಪ್ರತಿಯೊಬ್ಬರೂ ತಮ್ಮಲ್ಲಿ ತುಂಬಿಕೊಂಡಿದ್ದಾರೆ - ಇದನ್ನು ಪರಿಶೀಲನೆ ಮಾಡಬೇಕು. ಈಗ ಸಮಯ ಇದೆ. ಪರೀಕ್ಷೆಯ ಹಾಲ್‌ಗೆ ಹೋಗುವ ಎರಡು ಗಂಟೆ ಮೊದಲು ಸಹ ತಯಾರಿ ಮಾಡಿಕೊಂಡು ಹೋಗುತ್ತಾರೆ. ನಿಮಗೂ ಪರೀಕ್ಷೆಯ ಹಾಲ್‌ಗೆ ಹೋಗುವ ಮೊದಲು ತಯಾರಿ ಮಾಡಿಕೊಳ್ಳಲು ಈಗ ಸಮಯವಿದೆ. ಬ್ರಹ್ಮಾಕುಮಾರನ ಜೊತೆ ತಪಸ್ವೀಕುಮಾರ ಸಹ ಕಂಡುಬರಬೇಕು ಎಂದು ಹೇಳಲಾಗಿತ್ತಲ್ಲವೆ. ಹೋದ ತಕ್ಷಣವೇ ಭಿನ್ನ ಮತ್ತು ಎಲ್ಲರಿಗೂ ಪ್ರಿಯರಾಗಿ ಕಾಣುವಂತೆ ನಿಮ್ಮ ನಯನಗಳಲ್ಲಿ ಚಹರೆಯಲ್ಲಿ ಆತ್ಮೀಯತೆ ಧಾರಣೆ ಮಾಡಿಕೊಂಡಿರುವಿರಾ? ಕೇವಲ ಭಟ್ಟಿಯಲ್ಲಿ ಬಂದವರಷ್ಟೇ ಅಲ್ಲ ಯಾರು ಮಧುಬನಕ್ಕೆ ಬರುತ್ತೀರೋ ಅವರೆಲ್ಲರೂ ಈ ಧಾರಣೆಯನ್ನು ವಿಶೇಷ ರೂಪದಲ್ಲಿ ಮಾಡಬೇಕು. ಭಟ್ಟಿ ಸಫಲ ಇತ್ತೇ? ಇವರ ವಿದ್ಯಾಭ್ಯಾಸದ ತೀವ್ರತೆಯಿಂದ ನೀವು ಸಂತುಷ್ಟ ಆಗಿರುವಿರಾ? ನೀವು ವಿದ್ಯೆಯಿಂದ ನಿಮ್ಮ ಪುರುಷಾರ್ಥದಿಂದ ಸಂತುಷ್ಟ ಅಗಿದ್ದೀರಾ? ಏನಾದರೂ ಉಳಿದುಕೊಂಡಿಲ್ಲ ತಾನೆ (ಈಗ ಉಳಿದುಕೊಂಡಿಲ್ಲ) ಮುಂದೆ ಎಂದಾದರು. ಉಳಿದುಕೊಳ್ಳುತ್ತದೆಯೇನು?

ಇದು ನಿಮ್ಮ ಸುರಕ್ಷತೆಯ ಸಾಧನವನ್ನು ಹುಡುಕುವುದಾಗಿದೆ. ಏನಾದರೂ ಆದರೆ ಇದನ್ನು ಹೇಳಬಹುದು ಎಂದು ತಿಳಿದುಕೊಂಡಿದ್ದಾರೆ. ಆದರೆ ಇದರಿಂದಲೂ ದುರ್ಬಲತೆ ಬರುತ್ತದೆ. ಆದ್ದರಿಂದ ಇದನ್ನೂ ಎಂದೂ ವಿಚಾರ ಮಾಡಬೇಡಿ. ಎಂದೂ ನಾಪಾಸ್ ಆಗುವುದಿಲ್ಲ ಎಂದು ವಿಚಾರ ಮಾಡಿರಿ. ಈಗಲೂ ಇದೆ ಮತ್ತು ಜನ್ಮ ಜನ್ಮಾಂತರದ ಗ್ಯಾರಂಟಿ ಇದೆ ಎಂದೂ ನಾಪಾಸ್ ಆಗುವುದಿಲ್ಲ. ಇದಕ್ಕೆ ಪೂರ್ಣ ಪಾಸ್ ಎಂದು ಹೇಳುತ್ತಾರೆ. ಕುಮಾರರ ವಿಶೇಷತೆಯಾಗಿದೆ ಏನು ಬೇಕು ಅದನ್ನು ಮಾಡಲು ಸಾಧ್ಯವಿದೆ. ಈ ಸಂಕಲ್ಪ ಶಕ್ತಿ ಅವಶ್ಯ ಇದೆ. ಆದರೆ ಪ್ರತಿ ಸೆಕೆಂಡ್, ಪ್ರತಿ ಸಂಕಲ್ಪ ಅರ್ಪಣೆ ಮಾಡುವ ಸಂಕಲ್ಪ ಶಕ್ತಿ ಬೇಕು. ಮಕ್ಕಳಿಗೆ ಎಲ್ಲವನ್ನೂ ವಿಲ್(ಅರ್ಪಣೆ) ಮಾಡುತ್ತಾರಲ್ಲವೆ. ಏನೆಲ್ಲ ಇರುತ್ತದೆಯೋ ಅದನ್ನು ವಿಲ್ ಮಾಡುತ್ತಾರೆ. ಅದೇ ರೀತಿ ನೀವೂ ಸಹ ವಾರಸುದಾರರನ್ನು ತಯಾರು ಮಾಡುತ್ತೀರಿ ಮತ್ತು ತಯಾರಾಗುತ್ತೀರಿ. ಹೇಗೆ ಸಂಕಲ್ಪ ಶಕ್ತಿ ಇದೆಯೋ ಅದೇ ರೀತಿ ಎಲ್ಲವನ್ನೂ ವಿಲ್ ಮಾಡುವ ಶಕ್ತಿಯೂ ಇರಬೇಕು. ಇದನ್ನು ಇಲ್ಲಿಂದ ತುಂಬಿಕೊಂಡು ಹೋಗಿರಿ. ಎಲ್ಲವನ್ನೂ ವಿಲ್ ಮಾಡಿದಾಗ ಏನಾಗಿಬಿಡುವಿರಿ, ನಷ್ಟಮೋಹಿ, ಯಾವಾಗ ಮೋಹ ನಷ್ಟ ಆಗುತ್ತದೆ ಆಗ ಬಂಧನ ಮುಕ್ತ ಆಗುತ್ತೀರಿ ಮತ್ತು ಬಂಧನಮುಕ್ತ ಆದವರೇ ಯೋಗ ಯುಕ್ತ ಮತ್ತು ಜೀವನ ಮುಕ್ತ ಆಗಲು ಸಾಧ್ಯ ತಿಳಿಯಿತೆ? ಸಂಗಮ ಯುಗದ ಯಾವ ಖಜಾನೆ ಈಗ ನಿಮ್ಮ ಬಳಿ ಇದೆ? ಈ ಸಮುಯ ಮತ್ತು ಸಂಕಲ್ಪ. ಯಾವ ರೀತಿ ತಂದೆ ಪೂರ್ಣವಾಗಿ ತಮ್ಮನ್ನು ತಾವು ಅರ್ಪಣೆ ಮಾಡಿಕೊಂಡರು, ಅದೇ ರೀತಿ ನಿಮ್ಮ ಸ್ಮೃತಿ ಏನಿದೆ. ಅದನ್ನೂ ಪೂರ್ಣವಾಗಿ ಅರ್ಪಣೆ ಮಾಡಬೇಕು. ಯಾವ ರೀತಿ ಸ್ಥೂಲ ಖಜಾನೆಯಿಂದ ಏನು ಬೇಕೋ ಅದನ್ನು ಪ್ರಾಪ್ತಿ ಮಾಡಿಕೊಳ್ಳುತ್ತೀರಿ ತಾನೆ. ಅದೇ ರೀತಿ ಈ ಸಮಯದ ಈ ಖಜಾನೆ “ಸಮಯ ಮತ್ತು ಸಂಕಲ್ಪ" ಇದರಿಂದಲೂ ನೀವು ಏನು ಪ್ರಾಪ್ತಿ ಮಾಡಿಕೊಳ್ಳಬೇಕೆನ್ನುತ್ತೀರಿ ಅದನ್ನು ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಿದೆ. ಸರ್ವ ಪ್ರಾಪ್ತಿಗಳ ಆಧಾರ ಸಂಗಮ ಯುಗದ ಸಮಯ ಮತ್ತು ಶ್ರೇಷ್ಠ ಸ್ಮೃತಿ ಅರ್ಥಾತ್ ನೆನಪಾಗಿದೆ. ಇದೇ ಖಜಾನೆಯಾಗಿದೆ. ಇದನ್ನೇ ಅರ್ಪಣೆ ಮಾಡಬೇಕು. ಪೂರ್ಣವಾಗಿ ವೀಲ್ ಮಾಡಿ ಹೋಗುತ್ತಿರುವಿರೋ ಅಥವಾ ಜೇಬು ಖರ್ಚಿಗಾಗಿ ಇಟ್ಟುಕೊಂಡಿದ್ದೀರೊ? ಸಮಯಕ್ಕೆ ಇರಲಿ' ಎಂದು ಏನಾದರೂ ಸ್ವಲ್ಪ ಮೂಲೆಯಲ್ಲಿ ಮುಚ್ಚಿ ಇಟ್ಟುಕೊಂಡಿಲ್ಲ ತಾನೇ, ಜೇಬು ಪೂರ್ಣ ಖಾಲಿಯಾಗಿದೆಯೇ?

(ಕುಮಾರರು ಒಂದು ಗೀತೆಯನ್ನು ಬಾಬಾರವರ ಮುಂದೆ ಹಾಡಿದರು) ಈಗ ಮಧುಬನದ ಯಾವ ಮೂಲೆಯೂ ಖಾಲಿ ಇಲ್ಲ ಆದರೆ ಈ ಎಲ್ಲಾ ಸ್ಥಾನದಲ್ಲಿ ನಕ್ಷತ್ರಗಳ ಹೊಳಪು ಕಾಣಿಸುತ್ತಿದೆ. ಅಂದ ಮೇಲೆ ಖಾಲಿ ಎಂದು ಏಕೆ ಹೇಳುತ್ತೀರಿ? ಯಾವಾಗ ಸೂರ್ಯ ವ್ಯಕ್ತ ದಿಂದ ಅವ್ಯಕ್ತ ಆಗುತ್ತಾನೆಯೋ ಆಗ ನಕ್ಷತ್ರಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಈಗ ತಂದೆ ವ್ಯಕ್ತದಿಂದ ಅವ್ಯಕ್ತ ಆಗಿರುವುದು ವಿಶ್ವಕ್ಕೆ ನಕ್ಷತ್ರಗಳನ್ನು ಸ್ಪಷ್ಟವಾಗಿ ತೋರಿಸಲು. ಅಂದಾಗ ಖಾಲಿ ಎಂದು ಏಕೆ ಹೇಳುತ್ತಿರಿ? ಸ್ಥೂಲ ಸೂರ್ಯ ಅಸ್ತವಾದ ಎಂದು ಹೇಳುತ್ತಾರೆ ಆದರೆ ಈ ಜ್ಞಾನ ಸೂರ್ಯ ವ್ಯಕ್ತದಿಂದ ಅವ್ಯಕ್ತ ರೂಪ ಆಗಿದ್ದಾರೆ ಆದರೆ ಸಕ್ಷತ್ರಗಳ ಜೊತೆ ಇದ್ದಾರೆ. ಸಾಕಾರ ರೂಪದಿಂದ ಸದಾ ಜೊತೆಗಾರ ಆಗಲು ಸಾಧ್ಯವಿಲ್ಲ. ಸಾಕಾರದಲ್ಲಿದ್ದರೂ ಸದಾ ಜೊತೆಯಲ್ಲಿರಲು ಸಾಧ್ಯವಿಲ್ಲ. ಸಾಕಾರದಲ್ಲಿದ್ದರೂ ಸಹ ಸದಾ ಜೊತೆಯಲ್ಲಿರಲು ಅವ್ಯಕ್ತ ಸ್ಥಿತಿ ಮತ್ತು ಅವ್ಯಕ್ತ ಸಂಗಾತಿ ಎಂದು ತಿಳಿದುಕೊಳ್ಳುತ್ತಿದ್ದಿರಿ. ಆದ್ದರಿಂದ ಈಗಲೂ ಸದಾ ಅವ್ಯಕ್ತ ಸ್ಥಿತಿಯಲ್ಲಿದ್ದಾಗ ಮಾತ್ರ ಸದಾ ಜೊತೆಯಲ್ಲಿರಲು ಸಾಧ್ಯವಾಗುತ್ತದೆ. ಏಕೆಂದರೆ ಅವ್ಯಕ್ತ ರೂಪ ವ್ಯಕ್ತ ಶರೀರದ ಬಂಧನದಿಂದ ಮುಕ್ತವಾಗಿದೆ. ಆದ್ದರಿಂದ ನೀವೂ ಸಹ ಸದಾ ಜೊತೆಯಲ್ಲಿರಲು ಈ ಶರೀರದ ಸ್ಮೃತಿಯಿಂದ ದೂರ ಮಾಡಲು ಈ ಅವ್ಯಕ್ತ ಪಾತ್ರ ನಡೆಯುತ್ತಿದೆ. ಬಾಪ್ ದಾದಾ ಅಂತೂ ಎಲ್ಲಾ ಸಮಯದಲ್ಲಿ ಮಕ್ಕಳ ಜೊತೆಯಲ್ಲಿಯೇ ಇದ್ದಾರೆ. ಮೊದಲು ಒಂದು ಗೀತೆಯನ್ನು ಮಾಡಿದ್ದೀರಿ 'ಏಕೆ ಅಧೀರರಾಗುತ್ತೀರಿ ಮಾತೆಯರೆ. (ಈ ಹಾಡನ್ನು ಅಕ್ಕಂದಿರು ಹಾಡಿದರು) ಈಗಲೂ ಸದಾ ಪ್ರತಿಯೊಬ್ಬರ ಜೊತೆಗಾರ ಆಗಿದ್ದೇನೆ. ಆದರೆ ಯಾರು ಬೇಕು ಅವರು ಅನುಭವ ಮಾಡಬಹುದು. ಈಗ ಅನುಭವ ಮಾಡಲು ಯಾವ ರೀತಿ ತಂದೆ ಅವ್ಯಕ್ತ ಆಗಿದ್ದಾರೆಯೋ ಅದೇ ರೀತಿ ಅವ್ಯಕ್ತ ಆಗಿಯೇ ಅನುಭವ ಮಾಡಲು ಸಾಧ್ಯ. ಈ ಅಲೌಕಿಕ ಅನುಭವ ಮಾಡಲು ಸದಾ ವ್ಯಕ್ತ ಭಾವದಿಂದ ದೂರ, ವ್ಯಕ್ತ ದೇಶದ ಸ್ಮೃತಿಯಿಂದ ಉಪರಾಮ ಅರ್ಥಾತ್ ಸಾಕ್ಷಿ ಆಗಿರುವುದರಿಂದ ಮಾತ್ರ ಪ್ರತಿ ಸಮಯ ಜೊತೆಯ ಅನುಭವ ಮಾಡಲು ಸಾಧ್ಯ ತಿಳಿಯಿತೆ? ಒಳ್ಳೆಯದು.

ಅವ್ಯಕ್ತ ಮುರಳಿ 29-04-1971.

***ಬೇಹದ್ ಪರೀಕ್ಷೆಯಲ್ಲಿ ಪಾಸ್ ಆಗಲು ಸಾಧನ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ಸ್ಮೃತಿಯನ್ನು (ನನಗೆ ಪ್ರತೀ ಕ್ಷಣ ಪರೀಕ್ಷೆ ನಡೆಯುತ್ತಿದೆ), ವೃತ್ತಿಯನ್ನು ಮತ್ತು ದೃಷ್ಟಿಯನ್ನು (ಶಿಕ್ಷಣ ಕೊಡುವವರು ತಂದೆ ಮತ್ತು ನಾನು ಈಶ್ವರೀಯ ವಿದ್ಯಾರ್ಥಿ) ಬದಲಾಯಿಸಿಕೊಂಡು ನಾನು ಸಂಪೂರ್ಣ ಪಾಸ್ ಆಗಿದ್ದೇನೆ.

2. ನಾನು ಪುರುಷಾರ್ಥದ ಮೇಲೆ ಗಮನವಿಟ್ಟು ಉನ್ನತ ಪದವಿಯನ್ನು ಪಡೆದಿದ್ದೇನೆ.

3. ನನ್ನೊಳಗಿನ ಆತ್ಮೀಯತೆ ಎಂಬ ಸುವಾಸನೆಯನ್ನು, ತ್ರಿಕಾಲದರ್ಶಿತನದ ಬುದ್ಧಿವಂತಿಕೆಯನ್ನು ತುಂಬಿಕೊಂಡು ಸೇವಾಧಾರಿ ಹಾಗೂ ವಿಜಯೀ ಆಗಿದ್ದೇನೆ.

4. ನಾನು ನನ್ನ ನಯನಗಳಲ್ಲಿ ಮತ್ತು ಮುಖದಲ್ಲಿ ಆತ್ಮೀಯತೆಯನ್ನು ಧಾರಣೆ ಮಾಡಿ ಅಲೌಕಿಕವಾಗಿ, ಅತೀತವಾಗಿ ಮತ್ತು ಎಲ್ಲರಿಗೂ ಪ್ರಿಯವಾಗಿ ಕಾಣಿಸುವ ತಪಸ್ವಿ ಮೂರ್ತಿ.

5. ನಾನು ಎಲ್ಲವನ್ನೂ ತಂದೆಗೆ ಅರ್ಪಣೆ ಮಾಡಿ ನಷ್ಟಮೋಹಿಯಾದ ಬಂಧನ ಮುಕ್ತ, ಯೋಗಯುಕ್ತ ಮತ್ತು ಜೀವನ್ ಮುಕ್ತ ಸ್ವರೂಪ.

6. ತಂದೆ ಯಾವ ರೀತಿಯಾಗಿ ತನ್ನದೆಲ್ಲವನ್ನು ಮಕ್ಕಳಿಗೆ ಅರ್ಪಣೆ ಮಾಡಿದರೋ ಅದೇ ರೀತಿ ನನ್ನ ಹತ್ತಿರ ಇರುವ ಸಮಯ ಮತ್ತು ಸಂಕಲ್ಪಗಳ ಖಜಾನೆಯನ್ನು ಸಂಪೂರ್ಣವಾಗಿ ಅರ್ಪಣೆ ಮಾಡಿ ಸರ್ವಪ್ರಾಪ್ತಿಗಳಿಗೆ ಅಧಿಕಾರಿಯಾಗಿದ್ದೇನೆ.

7. ನಾನು ವ್ಯಕ್ತ ರೂಪದಲ್ಲಿದ್ದು ಅವ್ಯಕ್ತದಲ್ಲಿರುವ ತಂದೆಯನ್ನು ಸದಾ ನನ್ನ ಜೊತೆಗಾರನನ್ನಾಗಿ ಮಾಡಿಕೊಂಡಿದ್ದೇನೆ.